ವಾರದ ಪತ್ರ

## 'ಸಾಮಾಜಿಕ ಜವಾಬ್ದಾರಿ' ಯಶಸ್ಸಿನ ಮಾನದಂಡ

ವಿದ್ಯುನ್ಮಾನ ಮಾಧ್ಯಮಗಳಲ್ಲಿ 'ಚಂದನ'ವೇ ಚಂದ. ಇದನ್ನು ಹೊರತುಪಡಿಸಿದರೆ ಹೆಚ್ಚಿನ ವಾಹಿನಿಗಳಿಗೆ ಸಾಮಾಜಿಕ ಹೊಣೆಗಾರಿಕೆ ಕಡಿಮೆ. ಟಿಆರ್‌ಪಿ ಮಾನದಂಡದಲ್ಲಿ ಮೀಟರ್ ಏರಿಕೆಗೇ ಪರಮ ಆದ್ಯತೆಯನ್ನು ನೀಡುತ್ತಿವೆ. ಇದು ತಪ್ಪಬೇಕು. ಸಮಾಜಮುಖಿ ಚಿಂತನೆಯಲ್ಲಿ ತಮ್ಮ ಯಶಸ್ಸಿನ ಮೆಟ್ಟಿಲನ್ನು ಏರಬೇಕು. ಅದುವೇ ಯಶಸ್ಸಿನ ಮಾನದಂಡವೂ ಆಗಬೇಕು ಎಂದು ನನಗೆ ಅನ್ನಿಸುತ್ತದೆ.

—ಹದಾಲ್ ಸಿದ್ಧಯ್ಯ ಚಂದ್ರಶೇಖರ, ಬೆಂಗಳೂರು

## ಜಾನಪದ ತತ್ವಗಳ ಗರಡಿ

ಕನ್ನಡ ಸಾಹಿತ್ಯದಲ್ಲಿ ಜಾನಪದ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನ. ಚಂದನದ 'ಗಾನ ಗರಡಿ' ಕಾರ್ಯಕ್ರಮದಲ್ಲಿ ಕೋಲಾಟದ ಹಾಡು, ಸುಗ್ಗಿಯ ಹಾಡು, ಗರತಿಯ ಹಾಡು, ಸೋಬಾನ ಪದಗಳನ್ನು ಹಾಡಿಸುವ ಉತ್ತಮ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಗಾಯನದ ಜೊತೆಗೆ ಹಾಡಿನ ಅರ್ಥ ವಿವರವನ್ನು ನೀಡುವ ಸುಂದರ ಕಾರ್ಯಕ್ರಮವಿದು. ಆಧುನಿಕ ವಾದ್ಯ ಪರಿಕರಗಳನ್ನು ಬಳಸಿಯೂ ಜಾನಪದ ತತ್ವವನ್ನು ಜನರಿಗೆ ಉಣಬಡಿಸುತ್ತಿದೆ. ಇದು ಅತ್ಯುತ್ತಮವಾಗಿ ಮೂಡಿಬರುತ್ತಿರುವುದು ಸಂತೋಷದ ಸಂಗತಿ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮೋಡಿ ಮಾಡುವ ಮಕ್ಕಳು

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ವಿಶೇಷ ಕಾರ್ಯಕ್ರಮ. ಶೋನಲ್ಲಿನ ಮಕ್ಕಳ ಅಭಿನಯ, ರಂಗಸಜ್ಜಿಕೆ, ರಂಗಗೀತೆ ವೀಕ್ಷಕರನ್ನು ಮೋಡಿ ಮಾಡಿವೆ. ಪೋರ್ಚುಗೀಸರು ಹೊನ್ನಾವರವನ್ನು ಮುತ್ತಿಗೆ ಹಾಕಿದಾಗ ರಾಣಿ ಚೆನ್ನಭೈರಾದೇವಿ ತನ್ನ ಸೈನಿಕರೊಂದಿಗೆ ವೀರಾವೇಶದಿಂದ ಕಾದಾಡಿ ಹೊನ್ನಾವರ ವಶಪಡಿಸಿಕೊಳ್ಳುತ್ತಾಳೆ. ಈ ಐತಿಹಾಸಿಕ ಘಟನೆಯನ್ನು ಇಟ್ಟುಕೊಂಡು ರೂಪಿಸಿದ ರೂಪಕವನ್ನು ಮಕ್ಕಳು ಸೊಗಸಾಗಿ ಅಭಿನಯಿಸಿದರು.

ಮಕ್ಕಳ ಡೈಲಾಗಿನ ಸ್ಪಷ್ಟತೆ ಮತ್ತು ಅವರ ಅಭಿನಯ ಅಮೋಘ. ಪುರಂದರದಾಸರ ಜೀವನ ಆಧರಿತ ನಾಟಕ, 'ಹುಲಿ ಹೆಬ್ಬುಲಿ' ಎಂಬ ಹಾಸ್ಯ ನಾಟಕ, ಭಯೋತ್ಪಾದಕರ ದಾಳಿಗೆ ಬಲಿಯಾದ ಹುತಾತ್ಮ 'ಕ್ಯಾಪ್ಟನ್ ಪ್ರಜ್ವಲ್' ಅವರ ಬದುಕನ್ನು ಆಧರಿಸಿದ ಪ್ರಹಸನಗಳು ಕಣ್ಣಲ್ಲಿ ನೀರು ತರಿಸಿದವು. ಪ್ರಜ್ವಲ್ ಅವರ ಪೋಷಕರನ್ನೂ ಕರೆಸಿದ್ದು ಚೆನ್ನಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು




## ದೇವಲೋಕದಲ್ಲೂ ರಾಜಕಾರಣ!

ಕಲರ್ಸ್ ಸೂಪರ್ ವಾಹಿನಿಯಲ್ಲಿ ಮರು ಪ್ರಸಾರವಾಗುವ 'ಶನಿ' ಧಾರಾವಾಹಿಯನ್ನು ಇತ್ತೀಚೆಗೆ ನೋಡಿದಾಗ ಆಶ್ಚರ್ಯವಾಯಿತು. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ನಾನು ಸಚಿವ ಆಗಬೇಕು, ನನ್ನನ್ನು ಸಂಪುಟದಲ್ಲಿ ಸೇರಿಸಿಕೊಳ್ಳಬೇಕು ಎಂದು ದುಂಬಾಲು ಬೀಳುವ ಶಾಸಕರಂತೆ, ಈ ಧಾರಾವಾಹಿಯಲ್ಲಿ ದೇವಲೋಕದ ಸಮಿತಿಯಲ್ಲಿ ಯಾರು ಯಾರು ಸದಸ್ಯರಾಗಲು ಶಕ್ತಿಯನ್ನು ಮಾಪನ ಮಾಡುತ್ತಾರೆ. ತ್ರಿಮೂರ್ತಿಗಳ ನಂತರ ನಾನೇ ಶಕ್ತಿಶಾಲಿ ಎಂದು ದೇವರಾಜ ಇಂದ್ರ ಹೇಳಿದರೆ, ದೇವಲೋಕದಲ್ಲಿ ನನಗೂ ಪದವಿ ಬೇಕೆಂದು ರಾಹು ಹೇಳುತ್ತಾನೆ. ಸೂರ್ಯದೇವನ ಪತ್ನಿ ಸಂಜ್ಞಾ ತನಗೂ ದೇವಿ ಸ್ಥಾನ ಬೇಕೆಂದು ಹಟ ಹಿಡಿಯುತ್ತಾಳೆ.

ತ್ರಿಲೋಕ ಸಂಚಾರಿ ನಾರದನ ಸಾನ್ನಿಧ್ಯದಲ್ಲಿ ದೇವತೆಗಳ ಸಮಿತಿಯ ಸದಸ್ಯರನ್ನು ಶನಿ ಆಯ್ಕೆ ಮಾಡಬೇಕೆಂದು ತ್ರಿಮೂರ್ತಿಗಳ ಸಂದೇಶ ಇದೆ ಎಂದಾಗ, ಜ್ಞಾನಕ್ಕೆ ಪ್ರತಿರೂಪ ಬೃಹಸ್ಪತಿ, ಶಕ್ತಿ ಸಾಹಸಕ್ಕೆ ಮಂಗಳಾದೇವಿ, ಬುದ್ಧಿ–ವಿವೇಕಕ್ಕೆ ಬುಧ, ಸೂರ್ಯ, ಚಂದ್ರ, ರಾಹು, ಶುಕ್ರಾಚಾರ್ಯರು... ಈ ಸನ್ನಿವೇಶ ಗಮನಿಸಿದಾಗ ರಾಜಕಾರಣ ಇಂದು ನಿನ್ನೆಯದಲ್ಲ ಎಂದು ನನ್ನ ಅರಿವಿಗೆ ಬಂತು.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ



## ಕ್ರೈಂ ಕಥನಗಳಾದ ಧಾರಾವಾಹಿಗಳು

ಕಲರ್ಸ್ ಕನ್ನಡದ 'ಶಾಂತಂ ಪಾಪಂ' ನೈಜ ಘಟನೆಗಳನ್ನು ಆಧರಿಸಿ ಕಥೆಯನ್ನು ರೂಪಿಸುತ್ತದೆ. ಅದು ಗಂಟೆಗಟ್ಟಲೆ ಪ್ರಸಾರವಾಗ್ತಿದೆ. ಈ ಮೂಲಕ ಇದು ಯಾರ ಪಾಪ ತೊಳೆಯುತ್ತೋ, ಯಾರಿಗೆ ಶಾಂತಿಯನ್ನು ನೀಡುತ್ತದೆಯೋ ತಿಳಿಯುತ್ತಿಲ್ಲ.

ಸಮಾಜ ತಿದ್ದುವ ಪ್ರಯತ್ನ ಈ ಮೂಲಕ ಹೇಗೆ ಸಾಧ್ಯವೋ ಗೊತ್ತಿಲ್ಲ. ಇದೇ ಮಾದರಿಯ ಕಥೆಗಳೇ ಉಳಿದ ಧಾರಾವಾಹಿಗಳೂ ಹೇಳುತ್ತಿವೆ. ಒಟ್ಟಾರೆ ಧಾರಾವಾಹಿಗಳೂ ಕ್ರೈಂ ಸ್ಟೋರಿಯನ್ನು ಮೀರಿಸುತ್ತಿವೆ ಎಂದು ಭಾಸವಾಗುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ವಾಸ್ತವಕ್ಕೆ ದಕ್ಕಬೇಕು

ಝೀ ಕನ್ನಡದ 'ಸೀತಾರಾಮ'ದಲ್ಲಿ ಒಂದಿಷ್ಟು ಸುಧಾರಣೆ ಮಾಡಿದರೆ ಮಾತ್ರ ವೀಕ್ಷಕರಿಗೆ ಆಪ್ತವಾಗುತ್ತದೆ ಎಂದೆನಿಸುತ್ತದೆ.

ಕಥೆ ವಾಸ್ತವಕ್ಕೆ ಹತ್ತಿರವಾಗುವ ಸಂಗತಿಗಳನ್ನು ಒಳಗೊಂಡಿರಬೇಕು. ರಾಮನಿಗೆ ಅಪಘಾತವಾದಾಗ ಘಟನೆಯ ತನಿಖೆಯನ್ನು ಪೊಲೀಸ್ ಇಲಾಖೆಗೆ ವಹಿಸಲಾಗುತ್ತದೆ. ಆದರೆ ತನಿಖೆ ಸಮರ್ಪಕವಾಗಿ ಆಗುವುದೇ ಇಲ್ಲ. ಅಪಘಾತ ಉದ್ದೇಶಿತ ಅಪರಾಧ ಎನ್ನುವುದನ್ನು ಪೊಲೀಸರು ಭೇದಿಸುತ್ತಾರೆ ಎನ್ನುವ ನಿರೀಕ್ಷೆ ನಮಗಿತ್ತು. ಅದು ಹುಸಿಯಾಯಿತು. ಇದು ರಾಜ್ಯ ಪೊಲೀಸರಿಗೆ ಇರುವ ಖ್ಯಾತಿಗೂ ಕಳಂಕ ತಂದಂತೆ ಆಗುತ್ತದೆ. ಕಥೆಯಲ್ಲಿ ಜಾಹ್ನವಿ, ಭಾರ್ಗವಿ ಮತ್ತು ರುದ್ರಪ್ರತಾಪ್ ಅವರ ಹಿಡಿತದಿಂದ ಶ್ರೀರಾಮನಿಗೆ ಬಿಡುಗಡೆ ಇಲ್ಲವೇ? ದುಷ್ಟರಿಗೆ ಶಿಕ್ಷೆಯನ್ನು ನೀಡಿ. ರಾಮನಿಗೂ ವೈಯಕ್ತಿಕ ಬದುಕಿಗೆ ಅವಕಾಶ ಮಾಡಿಕೊಡಬೇಕು. ಹೀಗೇ ಆದರೆ ಅವನು ಸಂಸಾರವನ್ನು ಮಾಡುವುದು ಯಾವಾಗ?

—ವಿಜಯಲಕ್ಷ್ಮೀ, ಬೆಂಗಳೂರು